(೨) ಬಾಗಲ್‌ಕೋಟೆ ಆಸ್ಪತ್ರೆಯ ಆಂಬುಲೆನ್ಸ್ ವ್ಯಾನಿಗೆ ಚಾಲಕನ ನೇಮಕಾತಿ

ಶ್ರೀ ಬಾಬುರೆಡ್ಡಿ ವಿ ತುಂಗಳ್ —ಮಾನ್ಯ ಅಧ್ಯಕ್ಷರೆ, ಬಾಗಲಕೋಟೆಯಲ್ಲಿ ಒಂದು ಸುಸಜ್ಜಿತ ಕಾಲೇಜ್ ಆಸ್ಪತ್ರೆಯಿದ್ದು, ಈ ಆಸ್ಪತ್ರೆ ಸುತ್ತಲಿನ ತಾಲ್ಲೂಕುಗಳಾದ ಬೀಳಗಿ, ಹುನಗುಂದ ತಾಲ್ಲೂಕುಗಳ ರೋಗಿಗಳಿಗೆ ಸೌಲಭ್ಯವೊದಗಿಸುವಲ್ಲಿ, ಅತ್ಯಂತ ಅನುಕೂಲಕರವಾಗಿದೆ. ರೋಗಗಳಿಗೆ ಅದರಲ್ಲಿಯೂ ಬೇರೆ ಸ್ಥಳಗಳಿಂದ ಬಂದು ಹೊಗುವವರಿಗೆ ಸಕಿರ್ಯ ಒದಗಿಸುವ ದೃಷ್ಟಿಯಿಂದ ಸರ್ಕಾರವು ಈ ಆಸ್ಪತ್ರೆಗೆ ಒಂದೂವರೆ ಲಕ್ಷ ರೂಪಾಯಿ ಬೆಲೆ ಬಾಳುವ ಸುಸಜ್ಜಿತ ಆಂಬುಲೆನ್ಸ್ ವ್ಯಾನ್ ಒಂದನ್ನು ಒದಗಿಸಿದೆ. ಅದಕ್ಕಾಗಿ ನಾನು ಆರೋಗ್ಯ ಸಚಿವರನ್ನು ಅಭಿನಂದಿಸುತ್ತೇನೆ.

ಇಲ್ಲಿ ನಾನು ಅತ್ಯಂತ ವಿಷಾದದಿಂದ ಹೇಳಬಯಸುವ ಸಂಗತಿಯೆಂದರೆ, ಸರ್ಕಾರ ಕೊಡ ಮಾಡಿರುವ ಈ ಸುಸಜ್ಜಿತ ವಾಹನಕ್ಕೆ ಚಾಲಕರು ಇಲ್ಲದಿರುವುದು. ಒಂದೂ ಒಂದೂವರೆ ಲಕ್ಷ ರೂಪಾಯಿ ವಿರ್ಚುಮಾಡಿ ಆಂಬುಲೆನ್ಸ್ ಮಂಜೂರು ಮಾಡಿದವರು ಅದಕ್ಕೆ ಚಾಲಕನ ವ್ಯವಸ್ಥೆ ಮಾಡಬೇಕಾಗಿತ್ತು. ದಿನಾಂಕ ೧೮-೧-೧೯೮೬ರಿಂದ ಈ ವಾಹನಕ್ಕೆ ಚಾಲಕರೇ ಇಲ್ಲದ್ದರಿಂದ ಅದು ಧೂಳು ತಿನ್ನುತ್ತ ಬಾಗಲ ಕೋಟೆಯಂ ಕಾಲೇಜ್ ಆಸ್ಪತ್ರೆಯ ಆವರಣದಲ್ಲಿ ನಿಂತಿದ್ದು, ಜನರು ಗೇಲಿ ಮಾಡುವಂತಾಗಿದೆ. ರೋಗಿಗಳಿಗೆ ಸೌಲಭ್ಯ ಒದಗಿಸಂವ ದೃಷ್ಟಿಯಿಂದ ಅದನ್ನು ಕೊಡ ಮಾಡಿದ್ದು ಅದು ಈಗ ವ್ಯರ್ಥದಂತಾಗಿದ್ದು ಈ ವಾಹನಕ್ಕೆ ಓರ್ವ ಚಾಲಕನನ್ನು ಕೊಡುವ ವ್ಯವಸ್ಥೆ ಮಾಡಬೇಕೆಂದು ನಾನು ತಮ್ಮ ಮೂಲಕ ಆರೋಗ್ಯ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಬಾಗಲಕೋಟೆ ಜನರಲ್ ಆಸ್ಪತ್ರೆಗೆ ಒಂದು ಸುಸಜ್ಜಿತ ವಾಹನವನ್ನು ತಾರೀಖು ೧-೧೦-೧೯೮೫ರಂದು ಸರಬರಾಜು ಮಾಡಿದೆ. ಆದರೆ ಈ ವಾಹನಕ್ಕೆ ವಾಹನ ಚಾಲಕನ ಹುದ್ದೆ ಮಂಜೂರಾತಿ ಮಾಡಿರುವುದಿಲ್ಲ. ಸದ್ಯಕ್ಕೆ ವಾಹನವನ್ನು ಉಪಯೋಗಿಸುತ್ತಿಲ್ಲ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಬಿಜಾಪುರ ಜಿಲ್ಲಾ, ಇವರಿಗೆ ಹುದ್ದೆ ಮಂಜೂರಾತಿ ಮಾಡಿ ವಾಹನ ಚಾಲಕನ್ನು ತೆನಾತಿ ಮಾಡುವವರೆಗೆ ಒಬ್ಬ ಚಾಲಕನನ್ನು ಒದಗಿಸಲು ಆದೇಶ ನೀಡಿದೆ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಎಂ.ಎಸ್. ಕೃಷ್ಣನ್ ಅವರು ಇಲ್ಲ. ಆದ್ದರಿಂದ ಶ್ರೀ ಡಿ.ಎ. ಚಿನ್ನಪ್ಪನವರು ತಮ್ಮ ನೋಟೀಸ್‌ನ ಬಗ್ಗೆ ಪ್ರಸ್ತಾಪಮಾಡಬಹುದು.

(೩) ತಲಕಾವೇರಿಯನ್ನು ಅಭಿವೃದ್ಧಿಪಡಿಸಂವ ಬಗ್ಗೆ.

ಶ್ರೀ ಡಿ.ಎ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಜೀವನದಿಯಾದ ಕಾವೇರಿ ಮಾತೆಯ ಉಗಮ ಸ್ಥಾನವಾದ ಬ್ರಹ್ಮಗಿರಿ ಶಿಖರದಲ್ಲಿರುವ ತಲಕಾವೇರಿಯನ್ನು ಪುವಾಸೋದ್ಯಮ ಇಲಾಖೆಯವರು ಅಭಿವೃದ್ಧಿ ಮಾಡುವುದಾಗಿ ಸಂಬಂಧಪಟ್ಟ ಸಚಿವರು ಕಳೆದ ವರ್ಷ ಈ ಸದನದಲ್ಲಿ ಭರವಸೆ ನೀಡಿದ್ದು, ಈತನಕ ಭರವಸೆ ಭರವಸೆಯಾಗಿಯೇ ಉಳಿದಿದ್ದು, ಈ ಪುಣ್ಯ ಸ್ಥಳಕ್ಕೆ ಪ್ರತಿ ವರ್ಷ ಲಕ್ಷಗಟ್ಟಲೆ ಯಾತ್ರಿಕರು ಬಂದು ಹೋಗುತ್ತಿದ್ದಾರೆ. ಅವರಿಗೆ ತಂಗುಸ್ಥಳವಿಲ್ಲದೆ ಮತ್ತು ಊಟೋಪಚಾರದ ವ್ಯವಸ್ಥೆ ಇಲ್ಲದೆ ಬಹಳ ತೊಂದರೆಯಾಗಿದೆ. ಇಷ್ಟೇ ಅಲ್ಲದೆ, ತಲಕಾವೇರಿಯ ಅಭಿವೃದ್ಧಿಗಾಗಿ ೨.೫ ಲಕ್ಷ ರೂಪಾಯಿಯ ಅಂದಾಜುಪಟ್ಟಿಯನ್ನು ಸರಕಾರದ ಮಂಜೂರಾತಿಗಾಗಿ ೧೯೮೪ರಲ್ಲೇ ಕಳುಹಿಸಿದ್ದರೂ ಸಹ ಈವರೆವಿಗೂ ಸದರಿ ಅಂದಾಜು ಪಟ್ಟಿಗೆ ಸರ್ಕಾರದ ಅನುಮತಿ ದೊರೆತಿರುವುದಿಲ್ಲ ಈಗಲಾದರೂ ಸದರಿ ಅಂದಾಜಿಗೆ ಅನುಮತಿ ನೀಡಿ ಯಾತ್ರಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಸರಕಾರದರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸಂಬಂಧಪಟ್ಟ ಮಂತ್ರಿಗಳು ಸಭೆಯಲ್ಲಿಲ್ಲ. ಅವರಿಗೆ ಈ ವಿಷಯವನ್ನು ವಿವರಿಸಿ ಸದರಿ ಮಂತ್ರಿಗಳಿಂದ ಉತ್ತರ ತರಿಸಿ ಸದಸ್ಯರಿಗೆ ಒದಗಿಸಲಾಗುತ್ತದೆ.

ಅಧ್ಯಕ್ಷರು.—ಶ್ರೀ ಕೆ. ಬಿ. ಕೋಳಿವಾಡ ಮತ್ತು ಎಂ. ಎಲ್. ಉಸ್ತಾದ್.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಕೋಳಿವಾಡರವರ ಪರವಾಗಿ ನಾನು ಕೇಳುತ್ತೇನೆ.

ಅಧ್ಯಕ್ಷರು.—ನಿಯಮ ೩೩ರ ಪ್ರಕಾರ ಬೇರೆಯವರು ಪ್ರಶ್ನೆ ಕೇಳುವುದಕ್ಕೆ ಬರುವುದಿಲ್ಲ.